ಶ್ರೀ ಬಿ. ಎಂ. ಇದಿನಬ್ಬ.—ಎರಡು ವರ್ಷಗಳಲ್ಲಿ ೧೨೬೦ ಮಂದಿ ಅರ್ಜಿ ಹಾಕಿದ್ದರೂ ಕೂಡ ೧೬೫ ಮನೆಗಳನ್ನು ಕೊಟ್ಟಿರುವುದರಿಂದ ಬಹಳಷ್ಟು ಮಂದಿ ಬಡವರಿಗೆ ಅನ್ಯಾಯವಾಗಿದೆ. ಇದಕ್ಕೆ ಏನು ಹೇಳುತ್ತೀರಿ ?

ಶ್ರೀ ಪಿ. ಜಿ. ಆರ್. ಸಿಂಧ್ಯ,—ಬಡವರಿಗೆ ಮನೆ ಕಟ್ಟಿಕೊಡಬೇಕೆಂಬುದನ್ನು ಒಪ್ಪುತ್ತೇನೆ. ಆದರೆ ಹಣಕಾಸಿನ ಅಡಚಣೆ ಇರುವುದರಿಂದ ಕೆಲಸ ಸ್ವಲ್ಪ ನಿಧಾನವಾಗಿದೆ. ಪ್ರತಿ ತಾಲ್ಲೂಕಿನಲ್ಲೂ ಸಾವಿರಾರು ಮನೆಗಳು ಬೇಕಾಗುತ್ತವೆ. ಏನಾದರೂ ಮಾಡಿ ಅಲ್ಲೆಲ್ಲಾ ಜನತಾ ಮನೆಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಕಟ್ಟಿಕೊಡಲಿಕ್ಕೆ ಪ್ರಯತ್ನ ಮಾಡುತ್ತಿದ್ದೇವೆ.

ಶ್ರೀ ಬಿ. ಎಂ. ಇದಿನಬ್ಬ.—ಕಟ್ಟಿರತಕ್ಕ ಮನೆಗಳಲ್ಲಿ ಸರಿಯಾಗಿಲ್ಲದೆ ಹಾಳಾಗಿ ಹೋದ ವಿಚಾರ ಕೂಡ ನಮ್ಮ ಗಮನಕ್ಕೆ ಬಂದಿದೆ. ಕಟ್ಟಿಕೊಟ್ಟಿರುವುದೇ ೧೬೫ ಮನೆಗಳಂ. ಆದರಲ್ಲೂ ಹಾಳಾಗಿವೆ ಎಂದರೆ ಶೋಚನೀಯ. ಸಾವಿರಾರು ಮಂದಿ ಮನೆಗಳ ಸಲುವಾಗಿ ಬಿಡಿಬಿ. ಮತ್ತು ತಹಶೀಲ್ದಾರರ ಬಳಿ ಬರುವುದನ್ನು ನೋಡಿದರೆ ನಾಚಿಕೆಯಾಗುತ್ತದೆ. ಆದ್ದರಿಂದ, ಬಡವರಿಗೆ ತಾವು ಹೇಳಿದಂತೆ ಅತಿ ಶೀಘ್ರವಾಗಿ ಮನೆಗಳನ್ನು ಕಟ್ಟಿಕೊಡುವ ವ್ಯವಸ್ಥೆ ಮಾಡುತ್ತೀರಾ ? ಕನಿಷ್ಪ ನಿಮ್ಮ ವರ್ಗ ಮತ್ತು ನಿಮ್ಮ ಜಾತಿಯವರಿಗಾದರೂ ಕಟ್ಟಿಕೊಡುವ ವ್ಯವಸ್ಥೆ ಮಾಡಬೇಕು, ಏಕೆಂದರೆ ಅವರ ಅರ್ಜಿಗಳು ತುಂಬಾ ಇವೆ.

ಅಧ್ಯಕ್ಷರು.—ಪರಿಶೀಲನೆ ಮಾಡುತ್ತೇನೆಂದು ಹೇಳಿ.

ಶ್ರೀ ಪಿ. ಜಿ. ಆರ್. ಸಿಂಧ್ಯ —ಮನೆಗಳನ್ನು ರಿಪೇರಿ ಮಾಡಿಕೊಡಲಿಕ್ಕೆ ಜಿಲ್ಲಾಧಿಕಾರಿಗಳಿಗೆ ಆದೇಶ ಕೊಟ್ಟಿದ್ದೇನೆ. ಹೆಚ್ಚಾಗಿ ಮನೆಗಳನ್ನು ಕಟ್ಟಿಸಿಕೊಡುವ ಪ್ರಯತ್ನವನ್ನು ಕೂಡ ಮಾಡುತ್ತಿದ್ದೇವೆ. ಈ ವ್ಯವಸ್ಥೆ ಇಡೀ ರಾಜ್ಯದಲ್ಲೇ ಆಗಬೇಕಾಗಿದೆ.

ಪ್ರಶ್ನೆ ೪೨೪

ಶ್ರೀ ಟಿ. ಎಸ್. ಮಣಿ.—೧೦ ಸಾವಿರ ಮಂದಿ ಕೆಲಸಗಾರರನ್ನು ಕೆಲಸದಿಂದ ತೆಗೆದು ಹಾಕಲಾಗಿದೆ ಅವರೆಲ್ಲ ಬಹಳ ತಷ್ಟದಲ್ಲಿದ್ದಾರೆ. ಇದರ ಬಗ್ಗೆ ಏನು ಮಾಡುತ್ತೀರಿ ?

ಶ್ರೀ ಜೆ. ಎಸ್. ದೇಶಮುಖ್ (ಮಾನ್ಯ ವಿದ್ಯುತ್ ಮಂತ್ರಿಗಳು). —ಅದರ ಬಗ್ಗೆ ಲೋಕೋಪಯೋಗಿ ಮಂತ್ರಿಗಳ ಜೊತೆ ಚರ್ಚೆ ಮಾಡಿ ನಿರ್ಣಯ ತೆಗೆದುಕೊಳ್ಳುತ್ತೇನೆ.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳ ಪಟ್ಟಿ

ಸಣ್ಣ ಕೈಗಾರಿಕೆಗಳಿಗೆ ಉತ್ತೇಜನ

೧೦೦೮. ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕರ್ನಾಟಕ ರಾಜ್ಯದಲ್ಲಿರುವ ಸಣ್ಣ ಕೈಗಾರಿಕೆಗಳಿಗೆ ಉತ್ತೇಜನ ಕೊಡುವ ದೃಷ್ಟಿಯಿಂದ ಹೊಸದಾಗಿ ಪ್ರಾರಂಭವಾಗುವ ಇಂತಹ ಕೈಗಾರಿಕೆಗಳಿಗೆ ಮೊದಲು ೫ ವರ್ಷ ಕಟ್ಟಿದ ಮಾರಾಟ ಕರದ ಹಣವನ್ನು ಸರ್ಕಾರದವರು ವಾಪಸ್ಸು ಕೊಡುವುದಾಗಿ ಆದೇಶ ನೀಡಿರುವುದು ನಿಜವೇ ?

ಆ) ಹಾಗಿದ್ದಲ್ಲಿ ಸಣ್ಣ ಕೈಗಾರಿಕೆಗಳಿಂದ ವಸೂಲು ಮಾಡಿದ ಹಣ ವಾಪಸ್ಸು ಕೊಡಲಾಗಿದೆಯೇ?

ಇ) ಹಾಗಿಲ್ಲದಿದ್ದಲ್ಲಿ ಈ ಬಗ್ಗೆ ಮುಂದೆ ಅವರಂ ಕಟ್ಟಬೇಕಾದ ಮಾರಾಟ ತೆರಿಗೆಯ ಹಣಕ್ಕಾದರೂ ಹಂತ ಹಂತವಾಗಿ ಸರಿಹೊಂದಿಸಲು ಅಧಿಕಾರಿಗಳಿಗೆ ಆದೇಶ ನೀಡಲಾಗುವುದೇ ?

ಶ್ರೀ ಆರ್. ವಿ. ದೇಶಪಾಂಡೆ (ಸಣ್ಣ ಪ್ರಮಾಣದ ರಾಜ್ಯ ಕೈಗಾರಿಕಾ ಮಂತ್ರಿಗಳು).—

ಅ) ಸಧ್ಯಕ್ಕೆ ಇಲ್ಲ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಪ್ರಶ್ನೆ ಉದ್ಭವಿಸುವುದಿಲ್ಲ.